ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ವಹಿಸಲಾಗಿರುತ್ತದೆ. ಉಳಿದಂತೆ, ಕಾಯಿದೆ ಮತ್ತು ನಿಯಮಾವಳಿಗಳನ್ವಯ ಶೇ.25 ರ ಮೀಸಲಾತಿ ಮೀರದಂತೆ ಶಾಲೆಗಳಲ್ಲಿ ದಾಖಲಾತಿ ಒದಗಿಸಲಾಗಿರುತ್ತದೆ.

**ಮಾಡಿಗುಂಜಿ ಗ್ರಾಮದ ಶ್ರೀ ಮಾವಲಿ ದೇವಸ್ಥಾನ**

**1384(1759); ಶ್ರೀ ಅರವಿಂದ್ ಚಂದ್ರಕಾಂತ್ ಪಾಟೀಲ್ (ಖಾನಾಪುರ)**

ಅ) ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕಿನ ಮಾಡಿಗುಂಜಿ ಗ್ರಾಮದಲ್ಲಿ ಪುರಾತನ ಹಾಗೂ ಪ್ರಸಿದ್ಧವಾದ ಶ್ರೀ ಮಾವಲಿ ದೇವಸ್ಥಾನಕ್ಕೆ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂದು ಹೋಗುತ್ತಿರುವುದರಿಂದ ಮಾಡುವ ಪ್ರವಾಸಿ ಮಂದಿರ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು (ವಿವರ ನೀಡುವುದು);

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)**

ಅ) ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

**ಪಿ.ಯು.ಸಿ. ಉತ್ತರ ಪತ್ರಿಕೆಗಳ ಮೌಲ್ಯ ಮಾಪನದಲ್ಲಿ ಲೋಪ**

**1387(1730); ಶ್ರೀ ಅಶೋಕ ಆರ್. (ಪದ್ಮನಾಭ ನಗರ)**

ಅ) ಕಳೆದ ಮಾರ್ಚ್‌ನಲ್ಲಿ ನಡೆದ ಪಿ.ಯು.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಅಂಕವನ್ನು ನೀಡುವಲ್ಲಿ ಲೋಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಶಿಕ್ಷಕರು ಅಂಕಗಳನ್ನು ನೀಡುವಾಗ ವ್ಯತ್ಯಾಸ ಮಾಡಲು ಕಾರಣವೇನು;

ಇ) ಇದರಿಂದ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದುಷ್ಪರಿಣಾಮವಾಗಬಹುದೆಂದು ಶಿಕ್ಷಕರು ಯೋಚಿಸದೇ ಮನಬಂದಂತೆ ಅಂಕಗಳನ್ನು ನೀಡಿರುವುದು ಸರಿಯೇ;

ಈ) ಈ ರೀತಿ ನಡೆದುಕೊಂಡ ಶಿಕ್ಷಕರುಗಳ ಮೇಲೆ ಸರ್ಕಾರ ಕೈಗೊಂಡ ಕಾನೂನು ಕ್ರಮಗಳೇನು?

**ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಕಳೆದ ಮಾರ್ಚ್‌ನಲ್ಲಿ ನಡೆದ ಪಿ.ಯು.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಅಂಕವನ್ನು ನೀಡುವಲ್ಲಿ ಯಾವುದೇ ಲೋಪವಾಗಿರುವುದಿಲ್ಲ.

ಆ), ಇ) ಮತ್ತು ಈ) ಪ್ರಶ್ನೆ ಉದ್ಭವಿಸುವುದಿಲ್ಲ

## ಅಭಿವೃದ್ಧಿ ಕಾಮಗಾರಿಗಳು

**1388(1340); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)**

ಅ) 2013–14 ರಿಂದ 2015–16ನೇ ಸಾಲಿನವರೆಗೆ ರಾಯಚೂರು ಜಿಲ್ಲೆಯ ಸಿಂಧನೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ಕಾಮಗಾರಿಗಳ ವಿವರಗಳನ್ನು ನೀಡುವುದು);

ಆ) ಕಾಮಗಾರಿಗಳಿಗೆ ಬಿಡುಗಡೆಯಾದ ಹಾಗೂ ಖರ್ಚಾದ ಮೊತ್ತವೆಷ್ಟು (ಸಂಪೂರ್ಣ ವಿವರ ನೀಡುವುದು)?